ದಿ.30.05.2022 ರಂದು ಸಾಕ್ಷಿಯನ್ನು ಮತ್ತೆ ಕರೆಸಿ ಪ್ರಮಾಣವಚನ ಬೋಧಿಸಲಾಯ್ತು.

**ಮುಂದುವರಿದ ಪಾಟೀ ಸವಾಲುಃ 5 ಮತ್ತು 6ನೇ ಆರೋಪಿತರ ಪರಃ**
**ಶ್ರೀ ಎಸ್ ಎಸ್ ವಕೀಲರಿಂದಃ**

27. ನಿಮ್ಮ ಮೇಲೆ ಈ ದಿವಸದವರೆಗೂ ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ರೌಡಿ ಶೀಟ್ ಚಾಲ್ತಿಯಲ್ಲಿದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಅದರ ರದ್ದತಿಗಾಗಿ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದೆ ಮತ್ತು ಮಾನ್ಯ ನ್ಯಾಯಾಲಯವು ಎಸ್‌ಪಿರವರಿಗೆ ಮನವಿ ಮಾಡುವಂತೆ ತಿಳಿಸಿದ್ದರಿಂದ ಎರಡು ದಿವಸದ ಹಿಂದೆ ಎಸ್‌ಪಿರವರಿಗೆ ಅರ್ಜಿ ಸಲ್ಲಿಸಿದ್ದೇನೆ ಎನ್ನುತ್ತಾರೆ. ನಮ್ಮೂರಿನ ಲಕ್ಷ್ಮಿ ಮಂಜಣ್ಣ ಎಂಬುವವರು ನನ್ನ ವಿರುದ್ಧ ದಿಃ29.11.2021ರಂದು ನಾನು ಅವರ ಜಮೀನನ್ನು ಅತಿಕ್ರಮಣ ಮಾಡುತ್ತಿದ್ದೇನೆ ಎಂದು ದೂರನ್ನು ವಿಶ್ವನಾಥಪುರ ಪೋಲಿಸ್ ಠಾಣೆಗೆ ನೀಡಿದ್ದಾರೆ ಎಂದರೆ ನನಗೆ ನೆನಪಿಲ್ಲ. ನಮ್ಮೂರಿನ ಸುರೇಶ್, ಚೌಡಮ್ಮ, ಮುನಿಸಾಮಪ್ಪ, ಕೃಷ್ಣಮ್ಮ ಮತ್ತು ದೇವರಾಜು ಎಂಬುವವರು ನನ್ನ ವಿರುದ್ಧ ದಿಃ 11.05.2022ರಂದು ನಾನು ಅವರ ಜಮೀನನ್ನು ಅತಿಕ್ರಮಣ ಮಾಡುತ್ತಿದ್ದೇನೆ ಎಂದು ದೂರನ್ನು ವಿಶ್ವನಾಥಪುರ ಪೋಲಿಸ್ ಠಾಣೆಗೆ ನೀಡಿದ್ದಾರೆ ಎಂದರೆ ನೆನಪಿಲ್ಲ.

28. ದಿಃ12.02.2010 ರಿಂದ ದಿಃ16.02.2010 ರವರೆಗೆ ನಾನು ಊರಿನಲ್ಲಿಯೇ ಇದ್ದೆ. ಆಗ ನನ್ನ ಕಾರು ನನ್ನ ಸ್ವಾಧೀನದಲ್ಲಿಯೇ ಇತ್ತು. ಈ ಅವಧಿಯಲ್ಲಿ ವಿಶ್ವನಾಥಪುರ ಡಿವೈಎಸ್‌ಪಿ ಮತ್ತು ಆ ಠಾಣೆಯ ಸಿಪಿಐ, ಪಿಎಸ್‌ಐರವರು ಊರಿಗೆ ಬಂದಿದ್ದರು. ದಿಃ13.02.2010, 14.02.2010 ಮತ್ತು 15.02.2010 ಈ ಮೂರು ದಿವಸಗಳಲ್ಲಿ ಯಾವುದಾದರೂ ಪೋಲಿಸ್ ಸಿಬ್ಬಂದಿ ನಿಮ್ಮನ್ನು ಊರಲ್ಲಿ ಭೇಟಿಯಾದರೇ ಎಂದರೆ ಸಾಕ್ಷಿದಾರರು ಭೇಟಿಯಾಗಿದ್ದಾರೆ ಎನ್ನುತ್ತಾರೆ. ಆ ರೀತಿ ಭೇಟಿಯಾದಾಗ ನಾನು ಪೋಲಿಸರಿಗೆ ಘಟನೆಯ ಬಗ್ಗೆ ತಿಳಿಸಿದ್ದೇನೆ. ಆ ರೀತಿ ಘಟನೆಯ ಬಗ್ಗೆ ವಿಚಾರಿಸಿದಾಗ ಅವರು ನನ್ನ ಹೇಳಿಕೆ ಬರೆದುಕೊಂಡಿಲ್ಲ, ಸಾಕ್ಷಿದಾರರು

ಮುಂದುವರಿದು ದಿ:16.02.2010ರಂದು ಡಿವೈಎಸ್‌ಪಿ ಕಛೇರಿಗೆ ಬರುವಂತೆ ಪೋಲಿಸ್ ಸಿಬ್ಬಂದಿ ಹೇಳಿದ್ದರು, ಆ ದಿನ ನಾನು ಡಿವೈಎಸ್‌ಪಿ ಕಛೇರಿಗೆ ಹೋಗಿದ್ದೆ, ಆಗ ನನ್ನ ಹೇಳಿಕೆಯನ್ನು ಲಿಖಿತವಾಗಿ ಪಡೆದಿದ್ದಾರೆ ಎನ್ನುತ್ತಾರೆ. ದಿ:13, 14 ಮತ್ತು 15ನೇ ಫೆಬ್ರವರಿ 2010ರಂದು ನನ್ನ ಹೇಳಿಕೆಯನ್ನು ಲಿಖಿತವಾಗಿ ಪಡೆದುಕೊಳ್ಳುವಂತೆ ನಾನು ಪೋಲಿಸರಿಗೆ ಹೇಳಿಲ್ಲ. ಘಟನೆಯ ನಂತರ ಮತ್ತು ದಿ:16.02.2010ಕ್ಕಿಂತ ಮುಂಚಿತವಾಗಿ ನಾನು ವಿಶ್ವನಾಥಪುರ ಪೋಲಿಸ್ ಠಾಣೆಗೆ ಹೋಗಿದ್ದೆ.

29. ಘಟನೆಯ ದಿನ ದಿ:12.02.2010ರಂದು ಮಧ್ಯಾಹ್ನ 03.00 ಅಥವಾ 03.30 ಸಮಯಕ್ಕೆ ನಾನು ವಿಶ್ವನಾಥಪುರ ಪೋಲಿಸ್ ಠಾಣೆಗೆ ಹೋಗಿದ್ದೆ. ಠಾಣೆಯಲ್ಲಿ ಒಂದು ತಾಸು ಸಮಯವರೆಗೆ ಇದ್ದೆ. ಆಗ ಪಿಎಸ್‌ಐರವರು ಠಾಣೆಯಲ್ಲಿದ್ದರು. ಅವರು ನನ್ನ ಹೆಸರು, ವಿಳಾಸ ವಿಚಾರಿಸಿದ್ದಾರೆ. ಘಟನೆಯ ಬಗ್ಗೆ ಅವರು ನನ್ನನ್ನು ವಿಚಾರಿಸಿದ್ದಾರೆ. ಗಾಯಾಳುಗಳು ಮತ್ತು ಮೃತರಿಗೆ ನಾನು ಹೇಗೆ ಸಂಬಂಧ ಎಂದು ವಿಚಾರಿಸಿದ್ದಾರೆ. ಅವರು ನನ್ನ ಹೇಳಿಕೆಯನ್ನು ಬರೆದುಕೊಳ್ಳಲಿಲ್ಲ. ಅವರು ಫಿರ್ಯಾದಿಯನ್ನು ಬರೆಸಿಕೊಡುವಂತೆ ನನಗೆ ತಿಳಿಸಿದರು. ನೀವೆ ಫಿರ್ಯಾದಿಯನ್ನು ನೀಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿದಾರರು ನಾನು ಘಟನೆಯನ್ನು ಪೂರ್ತಿಯಾಗಿ ನೋಡದೇ ಇರುವುದರಿಂದ ನಾನು ಫಿರ್ಯಾದಿಯನ್ನು ನೀಡಿಲ್ಲ ಎನ್ನುತ್ತಾರೆ. ಘಟನೆಯ ಬಗ್ಗೆ ಪೂರ್ತಿ ವಿವರ ನನ್ನ ಚಿಕ್ಕಪ್ಪನ ಮಗನಾದ ಮುನಿಕೃಷ್ಣಪ್ಪ ಇವರು ಹೇಳಿದ ಮೇಲೆ ಗೊತ್ತಾಗಿದೆ.

30. ದೇವನಹಳ್ಳಿ ಆಸ್ಪತ್ರೆಯಿಂದ ವಿಶ್ವನಾಥಪುರ ಪೋಲಿಸ್ ಠಾಣೆಗೆ ಹತ್ತು ನಿಮಿಷ ಸಮಯದಲ್ಲಿ ತಲುಪಬಹುದು ಎಂದರೆ ಸರಿಯಲ್ಲ. ಫಿರ್ಯಾದಿ ಬರೆಯಲು ಪೇಪರನ್ನು ನಾನು ಮತ್ತು ಮುನಿಕೃಷ್ಣಪ್ಪ ಅಂಗಡಿಯಲ್ಲಿ ತೆಗೆದುಕೊಂಡು ಬಂದೆವು. ಪೇಪರನ್ನು ಠಾಣೆಯ ಪಕ್ಕದ

ಜೆರಾಕ್ಸ್ ಅಂಗಡಿಯಲ್ಲಿ ಪಡೆದು ಅಲ್ಲೇ ಫಿರ್ಯಾದಿಯನ್ನು ಬರೆದು ಅದನ್ನು ಪೋಲಿಸ್ ಠಾಣೆಯಲ್ಲಿ ನೀಡಿದ್ದೇವೆ. ಫಿರ್ಯಾದಿ ಬರೆಯಲು 15ರಿಂದ 20 ನಿಮಿಷ ಸಮಯ ಬೇಕಾಯಿತು. ನಿಪಿ-1 ಫಿರ್ಯಾದಿಯನ್ನು ಎಷ್ಟು ಘಂಟೆಯಿಂದ ಎಷ್ಟು ಘಂಟೆಯವರೆಗೆ ಬರೆಯಲಾಗಿದೆ ಎಂದು ಅದರಲ್ಲಿ ದೃಡೀಕರಣವನ್ನು ನಾನು ಮಾಡಿದ ಬಗ್ಗೆ ನೆನಪಿಲ್ಲ. ಅದನ್ನು ನಾನೇ ಬರೆದಿದ್ದಾಗಿ ಅದಕ್ಕೆ ಸಹಿ ಮಾಡಿಲ್ಲ ಎಂದರೆ ಸರಿ. ದಿ:12.02.2010ರ ಮಧ್ಯಾಹ್ನ 02.30ರ ನಂತರ ನಾನು ವಿಶ್ವನಾಥಪುರ ಪೋಲಿಸ್ ಠಾಣೆಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-1ರಲ್ಲಿನ ಹಸ್ತಾಕ್ಷರ ನನ್ನದು ಅಲ್ಲ ಎಂದರೆ ಸರಿಯಲ್ಲ. ನಿಪಿ-1ನ್ನು ಪೋಲಿಸರೇ ದೇವನಹಳ್ಳಿಯಲ್ಲಿ ದಿ:12.02.2010ರ ರಾತ್ರಿ 8.00 ಘಂಟೆಗೆ ತಯಾರು ಮಾಡಿ ಪ್ರಾಸಾ-1 ಇವರ ಸಹಿಯನ್ನು ಪಡೆದಿದ್ದಾರೆ ಎಂದರೆ ಸರಿಯಲ್ಲ.

31. ನನ್ನ ಮನೆಯ ಬಾಗಿಲು ಪೂರ್ವ ದಿಕ್ಕಿಗೆ ಇದೆ. ನನ್ನ ಮನೆಯ ಬಾಗಿಲಿನಿಂದ ಘಟನಾ ಸ್ಥಳ 25ರಿಂದ 30 ಅಡಿ ದೂರ ಇದೆ. ನನ್ನ ಮನೆಯ ಮುಂಬಾಗಿಲಿನ ಒಳಗೆ ಮತ್ತು ಹೊರಗೆ ಚಿಲಕ ಇದೆ. 2010ರಲ್ಲಿ ನನ್ನ ಮನೆಯ ಉತ್ತರಕ್ಕೆ, ದಕ್ಷಿಣ ಮತ್ತು ಪಶ್ಚಿಮಕ್ಕೆ ಬೇರೆಯವರ ಮನೆಗಳು ಇರಲಿಲ್ಲ. ನನ್ನ ಮನೆಯ ಉತ್ತರಕ್ಕೆ ಸರ್ಕಾರಿ ರಸ್ತೆ ಇದೆ ಎಂದರೆ ಸರಿಯಲ್ಲ. ನಮ್ಮೂರಿನ ಪೂರ್ವಕ್ಕೆ ರಸ್ತೆ ಇದೆ. ಆ ರಸ್ತೆ ಊರ ಮಧ್ಯದಲ್ಲಿ ಬರುವುದಿಲ್ಲ. ನಮ್ಮೂರಿನಿಂದ ತಿಂಡ್ಲು ಗ್ರಾಮಕ್ಕೆ ಹೋಗುವ ರಸ್ತೆಯ ಎಡದಿಕ್ಕಿಗೆ ನನ್ನ ಮನೆ ಇದೆ. ಸದರಿ ರಸ್ತೆಯ ಬಲದಿಕ್ಕಿಗೆ ನಮ್ಮೂರಿನ ಬೇರೆಯವರ ಮನೆಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ನಮ್ಮೂರಲ್ಲಿ 75-80 ಮನೆಗಳು ಇವೆ. ನಮ್ಮೂರಲ್ಲಿ ನಮ್ಮ ಕುಲದವರೇ ಹೆಚ್ಚು ಎಂದರೆ ಸರಿ. 2010ರಲ್ಲಿ ಸದರಿ ರಸ್ತೆ ಮಣ್ಣು ಮತ್ತು ಜಲ್ಲಿ ರಸ್ತೆ ಇತ್ತು. ಸದರಿ ರಸ್ತೆಗೆ ಹೊಂದಿಕೊಂಡೇ ನನ್ನ ಮನೆ ಇದೆ. ಅದು ಸುಮಾರು 20 ಅಡಿ ರಸ್ತೆ ಇದೆ. ನನ್ನ ಮನೆಯಲ್ಲಿ ಕೂಗಿದರೆ ಸದರಿ ರಸ್ತೆಯ ಬಲಕ್ಕೆ ಇರುವ ಮನೆಯವರಿಗೆ ಕೇಳಿಸುತ್ತದೆ ಎಂದರೆ ಸರಿಯಲ್ಲ.

32. ದಿ:10.02.2010ಕ್ಕೂ ಮೊದಲು ಅದೇ ವರ್ಷ ನಾನು 1ನೇ ಆರೋಪಿಯ ಕಡೆಯಿಂದ ಇಟ್ಟಿಗೆಯನ್ನು ಖರೀದಿಸಿದ್ದೆ ಎಂದರೆ ಸರಿ. ಸದರಿ ಖರೀದಿಗೆ ಸಂಬಂಧಿಸಿದಂತೆ ನಾನು 1ನೇ ಆರೋಪಿಗೆ ಹಣ ಕೊಡುವುದು ಬಾಕಿ ಇತ್ತು ಎಂದರೆ ಸರಿ. ದಿ:10.02.2010ರಂದು ನಾನು ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿ ರೂಂ ಮಾಡಿಕೊಂಡು ವಾಸ ಇದ್ದೆ ಎಂದರೆ ಸರಿ. ದಿ:10.02.2010ರಂದು ಬೆಳಗ್ಗೆ ನಿಮ್ಮ ವಾಹನದಲ್ಲಿ ಎಷ್ಟು ಘಂಟೆಗೆ ದ್ಯಾವರಹಳ್ಳಿಗೆ ಬಂದಿರಿ ಎಂದರೆ ಸಾಕ್ಷಿದಾರರು ಸಮಯ ನೆನಪಿಲ್ಲ ಎನ್ನುತ್ತಾರೆ. ಆ ದಿನ ಬೆಂಗಳೂರಿಗೆ ವಾಪಸ್ಸು ಎಷ್ಟು ಘಂಟೆಗೆ ಮರಳಿದೆ ಎಂದು ಸಮಯ ನೆನಪಿಲ್ಲ.

33. ನಮ್ಮ ಊರಿನ 4ನೇ ಆರೋಪಿ ಗೋವಿಂದರಾಜರ ಅಂಗಡಿಯ ಬಳಿಗೆ 1ನೇ ಅರೋಪಿ ಮತ್ತು ಮೃತ 9ನೇ ಆರೋಪಿ ಬಂದಿದ್ದು, 6ನೇ ಆರೋಪಿ ಶಾಂತಕುಮಾರ, 5ನೇ ಆರೋಪಿ ಮುನಿರಾಜು ಮಧ್ಯಾಹ್ನ 3ರಿಂದ 4ರ ಸಮಯದಲ್ಲಿ ಮಾತನಾಡಿಕೊಳ್ಳುತ್ತಾ ನಿಂತಿದ್ದರು ಎಂದು ತನಿಖಾಧಿಕಾರಿಯವರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ನಾನು ಹೇಳಿದ್ದೆ ಅವರು ಬರೆದುಕೊಂಡಿಲ್ಲ. ಆ ರೀತಿ ಅವರು ನನ್ನ ಸದರಿ ಹೇಳಿಕೆಯನ್ನು ಬರೆದುಕೊಂಡಿಲ್ಲ ಎಂಬ ವಿಚಾರ ನನಗೆ ಯಾವಾಗ ಗೊತ್ತಾಗಿದೆ ಎಂದು ನೆನಪಿಲ್ಲ. 1ನೇ ಆರೋಪಿ ಸದರಿ ಟಿಲ್ಲರ್‌ಅನ್ನು ತೆಗೆದುಕೊಂಡು ಹೋಗುತ್ತೇನೆ ಎಂದು ಹೇಳಿದರು ಎಂದು ಮುಖ್ಯ ವಿಚಾರಣೆಯ 3ನೇ ಪ್ಯಾರಾದಲ್ಲಿ ಹೇಳಿದ ಸಂಗತಿಯನ್ನು ತನಿಖಾಧಿಕಾರಿಯವರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

34. ದಿ:10.02.2010ರಂದು ತಿಮ್ಮಯ್ಯ ಮತ್ತು ಕುಮಾರ ಹಣ ಕೇಳಲು ಬಂದಾಗ ನಾಳೆ ನಮ್ಮಣ್ಣನ ಮುಖಾಂತರ ಕಳುಹಿಸಿಕೊಡುವುದಾಗಿ ಹೇಳಿ ಕಳುಹಿಸಿದ್ದೆ ಎಂದು ತನಿಖಾಧಿಕಾರಿಯವರಿಗೆ ಹೇಳಿದ್ದೇನೆ. ನನ್ನ ಹಾಗೂ 1ನೇ ಆರೋಪಿಯ ಮಧ್ಯೆ ಮೌಖಿಕವಾಗಿ

ಜಗಳ ನಡೆದಿತ್ತು ಎಂದು ಮುಖ್ಯ ವಿಚಾರಣೆಯ 4ನೇ ಪ್ಯಾರಾದಲ್ಲಿ ಹೇಳಿದ ಸಂಗತಿಯನ್ನು ತನಿಖಾಧಿಕಾರಿಯವರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

35. 1ನೇ ಆರೋಪಿ ಮೊಬೈಲ್ ಅನ್ನು ಮನೆಯ ಮುಂದಿನ ರಸ್ತೆಯ ಪಕ್ಕದ ಚರಂಡಿಯಲ್ಲಿ ಬಿಸಾಕಿದ. ಆ ಚರಂಡಿ ಎಲ್ಲರಿಗೂ ಕಾಣವ ಸ್ಥಳ ಎಂದರೆ ಸರಿ. 1ನೇ ಆರೋಪಿ ಬಿಟ್ಟು ಹೋದ ಬೈಕ್‌ನ ಸಂಖ್ಯೆ ನೆನಪಿಲ್ಲ. ಮೊಬೈಲ್ ಬಿಸಾಕಿದ ಸ್ಥಳ ಮತ್ತು ಬೈಕ್ ಅನ್ನು ಬಿಟ್ಟು ಹೋದ ಸ್ಥಳವನ್ನು ನಾನು ಪೋಲಿಸರಿಗೆ ತೋರಿಸಿದ್ದೇನೆ. ಪೋಲಿಸರು ಮೊಬೈಲ್ ಫೋನ್ ಅನ್ನು ವಶಪಡಿಸಿಕೊಂಡ ಬಗ್ಗೆ ನೆನಪಿಲ್ಲ. ನಾನು ತೋರಿಸಿದ ಸದರಿ ಸ್ಥಳಗಳ ಸ್ಥಳ ಮಹಜರ್‌ಅನ್ನು ಪೋಲಿಸರು ಮಾಡಿದ್ದಾರೆ. ಆ ಮಹಜರ್‌ಗೆ ನನ್ನ ಸಹಿ ಪಡೆದಿದ್ದಾರೆ. ಮೊಬೈಲ್ ಅನ್ನು ಬಿಸಾಕಿ ಬೈಕ್ ಅನ್ನು ಅಲ್ಲೇ ಬಿಟ್ಟು ನಂತರ 1ನೇ ಆರೋಪಿ ‘‘ಊರ ಒಳಗೆ ಹೋಗಿದ್ದರು‘‘ ಎಂಬ ವಿಷಯವನ್ನು ಪೋಲಿಸರಿಗ ಹೇಳಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಯವರಿಗೆ ಇನ್ನೊಂದು ಘಂಟೆಯಲ್ಲಿ ಪರಿಣಾಮ ಏನಾಗುತ್ತದೆ ‘‘ಅಂತ ಹೇಳಿ ಹೊರಟು ಹೋದ ‘‘ ಎಂದು ಹೇಳಿಕೆ ನೀಡಿದ್ದೇನೆ. 1ನೇ ಆರೋಪಿ ತಿಮ್ಮಯ್ಯನ ಊರು ನಮ್ಮ ಮನೆಯಿಂದ ಸುಮಾರು ಎರಡೂವರೆ ಕಿ.ಮೀ. ದೂರದಲ್ಲಿದೆ.

36. 9.30ರಿಂದ 10.30ರ ಸಮಯದಲ್ಲಿ ದೊಡ್ಡ ಚಿನ್ನಪ್ಪ, ಅತ್ತಿಗೆ ಗಾಯಿತ್ರಮ್ಮ, ನನ್ನ ಚಿಕ್ಕಪ್ಪನ ಮಗ ದೇವರಾಜು, ಚಾಸಾ-1, ಚಾಸಾ-2 ನನ್ನ ಕೋಳಿ ಫಾರಂ ಶೆಡ್ ಬಳಿ ಇದ್ದಾಗ ಎರಡು ಕಾರ್ ಮತ್ತು ನಾಲ್ಕೈದು ಬೈಕ್‌ಗಳಲ್ಲಿ ನಮ್ಮ ಮನೆಯ ಬಳಿ 19 ಜನ ಆರೋಪಿತರು ಲಾಂಗ್, ಚಾಕು, ಚೂರಿಗಳೊಂದಿಗೆ ಬಂದು ಇಳಿದರು ಎಂದು ಮುಖ್ಯವಿಚಾರಣೆಯ 5ನೇ ಪ್ಯಾರದಲ್ಲಿ ಹೇಳಿದಂತೆ ತನಿಖಾಧಿಕಾರಿಯವರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

37. 10ನೇ ಆರೋಪಿ ಮತ್ತು ನನಗೆ ಯಾವುದೇ ಹಣದ ವ್ಯವಹಾರ ಇಲ್ಲ ಎಂದರೆ ಸರಿ. 8ನೇ ಆರೋಪಿ, ಮೃತ 9ನೇ ಆರೋಪಿ ಮತ್ತು 10ನೇ ಆರೋಪಿತರು ಕಾರಿನಿಂದ ಇಳಿದು ಬಂದರು ಎಂದು ಮುಖ್ಯವಿಚಾರಣೆಯ 6ನೇ ಪ್ಯಾರದಲ್ಲಿ ಹೇಳಿದಂತೆ ತನಿಖಾಧಿಕಾರಿಯವರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. 10ನೇ ಆರೋಪಿ ನನಗೆ, ವಡ್ಡ ನನ್ನ ಮಗನೇ, ನಿಮ್ಮ ಜಾತಿಗೆ ಎಷ್ಟು ಉಗಿದರೂ ಮಾನ ಮಾರ್ಯಾದೆ ಇರುವುದಿಲ್ಲವೇ, ನೀವು ಕುಡುಕ ನನ್ನ ಮಕ್ಕಳು ಅಂತ ನನ್ನ ಮಕ್ಕಳು ಇಂತ ನನ್ನ ಮಕ್ಕಳು ಎಂದು ಜಾತಿ ನಿಂದನೆ ಮಾಡಿದ್ದರು ಹಾಗೂ 10ನೇ ಆರೋಪಿ ಒಕ್ಕಲಿಗ ಜನಾಂಗಕ್ಕೆ ಸೇರಿದವರು ಮತ್ತು ಆತ ಕೈಯಿಂದ ನನ್ನ ಎಡಗೆನ್ನೆಗೆ ಹೊಡೆದರು ಎಂದು ಮುಖ್ಯವಿಚಾರಣೆಯ 6ನೇ ಪ್ಯಾರದಲ್ಲಿ ಹೇಳಿದ ಸಂಗತಿಗಳನ್ನು ತನಿಖಾಧಿಕಾರಿಯವರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. 10ನೇ ಆರೋಪಿ ಮಂಜುನಾಥನ ಪರಿಚಯ ನನಗಿಲ್ಲ ಎಂದರೆ ಸರಿಯಲ್ಲ. ಆತನ ಬೊಮ್ಮವಾರ ಗ್ರಾಮ ನಮ್ಮೂರಿನಿಂದ 9-10 ಕಿ.ಮೀ. ದೂರದಲ್ಲಿದೆ. ಮೃತರಾದ ದೊಡ್ಡಚಿನ್ನಪ್ಪ, ಗಾಯಿತ್ರಮ್ಮ ಮತ್ತು ದೇವರಾಜು ಹಾಗೂ ಚಾಸಾ-1, 2 ಮತ್ತು 5ರವರು ನನ್ನನ್ನು 19 ಜನರಿಂದ ತಪ್ಪಿಸಿ ಮನೆಯ ಒಳಗೆ ಹಾಕಿ ಚಿಲಕ ಹಾಕಿದರು ಎಂಬ ಸಂಗತಿಯನ್ನು ಸಹ ತನಿಖಾಧಿಕಾರಿಯವರಿಗೆ ಹೇಳಿಲ್ಲ ಎಂದರೆ ಸರಿಯಲ್ಲ.

38. ಗಲಾಟೆ ನಡೆದ ಸ್ಥಳದಿಂದ ಕೋಳಿ ಫಾರಂ ಶೆಡ್‌ಗೆ 15ರಿಂದ 20 ಅಡಿ ಅಂತರ ಇತ್ತು ಹಾಗೂ ಗಲಾಟೆ ಜೋರಾಗಿ ಕೇಳಿಸುತ್ತಿದ್ದ ಕಾರಣ ಸುಮಾರು 15ರಿಂದ 20 ನಿಮಿಷದ ನಂತರ ಯಾರೋ ಚಿಲಕ ತೆಗೆದಿದ್ದರು, ನಾನು ಅದಕ್ಕಿಂತ ಮೊದಲು ಬಾಗಿಲು ತೆಗೆಯಲು ಪ್ರಯತ್ನಿಸಿದ್ದೆ ಎಂಬ ಸಂಗತಿಗಳನ್ನು ಸಹ ತನಿಖಾಧಿಕಾರಿಯವರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣತಮ್ಮಂದಿರನ್ನು ಹೊರತುಪಡಿಸಿ ಗಾಯಾಳುಗಳನ್ನು ಮತ್ತು ಮೃತರನ್ನು ದೇವನಹಳ್ಳಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಊರಿನ ಯಾರು ಬಂದಿದ್ದರು ಎಂದು ಹೇಳಲು ಈಗ

ನೆನಪಿಲ್ಲ. ಮೂವರು ಮೃತರನ್ನು ಮತ್ತು ಮೂವರು ಗಾಯಾಳುಗಳನ್ನು ಸ್ಕಾರ್ಪಿಯೋ ವಾಹನದಲ್ಲಿ ಉಳಿದವರೊಂದಿಗೆ ನಾನು ಸಹ ಎತ್ತಿಹಾಕಿದ್ದೇನೆ ಮತ್ತು ಅವರ ಜೊತೆಗೆ ಆಸ್ಪತ್ರೆಗೆ ಬಂದಿದ್ದೇನೆ. ಸದರಿ ಮೃತರನ್ನು ಮತ್ತು ಗಾಯೂಳುಗಳನ್ನು ವಾಹನದಲ್ಲಿ ಹಾಕುವಾಗ ಅವರಿಗೆ ರಕ್ತಸ್ರಾವವಾಗುತ್ತಿತ್ತು, ಆ ರೀತಿ ಹಾಕುವಾಗ ನಿಮ್ಮ ಕೈಗೆ ಮತ್ತು ಬಟ್ಟೆಗೆ ರಕ್ತದ ಕಲೆ ಆಗಿದೆಯೇ ಎಂದರೆ ಸಾಕ್ಷಿದಾರರು ನೆನಪಿಲ್ಲ ಎನ್ನುತ್ತಾರೆ. ಮೃತರನ್ನು ವಾಹನದಲ್ಲಿ ಹಾಕುವಾಗ ಮತ್ತು ಆಸ್ಪತ್ರೆಗೆ ಕರೆದುಕೊಂಡು ಹೋಗುವವರೆಗೆ ಪ್ರಜ್ಞೆ ಇತ್ತು. ಸ್ಕಾರ್ಪಿಯೋ ವಾಹನದಲ್ಲಿ ಹಾಕುವ ಮೊದಲು ಗಾಯಾಳುಗಳು ಮತ್ತು ಮೃತರು ನೆಲದ ಮೇಲೆ ಬಿದ್ದಿದ್ದರು. ದೊಡ್ಡಚಿನ್ನಪ್ಪ, ಗಾಯಿತ್ರಮ್ಮ ಮತ್ತು ದೇವರಾಜು ಹತ್ತಿರ ಹತ್ತಿರ ಬಿದ್ದಿದ್ದರು ಆದರೆ ಅವರ ಮಧ್ಯದ ಅಂತರ ಈಗ ಬಹಳಷ್ಟು ವರ್ಷ ಆಗಿರುವುದರಿಂದ ಹೇಳಲು ಆಗುವುದಿಲ್ಲ. ಮೃತರು ಮತ್ತು ಗಾಯಾಳುಗಳು ಬಿದ್ದ ಸ್ಥಳದಲ್ಲಿ ಅವರ ರಕ್ತದಿಂದ ಸ್ಥಳದಲ್ಲಿ ರಕ್ತಕಲೆಯಾಗಿತ್ತು, ಆಸ್ಪತ್ರೆಗೆ ದಾಖಲಿಸುವವರೆಗೂ ಮೃತರು ಮತ್ತು ಗಾಯಾಳುಗಳಿಂದ ರಕ್ತಸ್ರಾವವಾಗುತ್ತಿತ್ತು, ನನ್ನ ಸ್ಕಾರ್ಪಿಯೋ ವಾಹನದಲ್ಲಿ ಅವರನ್ನು ಕರೆದುಕೊಂಡು ಹೋಗುವಾಗ ವಾಹನದಲ್ಲಿ ರಕ್ತದ ಕಲೆ ಆಗಿರಬಹುದು. ಮೃತರನ್ನು ಮತ್ತು ಗಾಯಾಳುಗಳನ್ನು ವಾಹನದಲ್ಲಿ ಹಾಕಲು ನಾಲ್ಕೈದು ಜನ ಸಹಾಯ ಮಾಡಿದ್ದಾರೆ. ಅವರ ಕೈಗಳಿಗೆ ಮತ್ತು ಬಟ್ಟೆಗಳಿಗೆ ರಕ್ತದ ಕಲೆಯಾದ ಬಗ್ಗೆ ಜ್ಞಾಪಕವಿಲ್ಲ.

39. ದಿಃ16.02.2010ರಂದು ಅದೇ ಸ್ಕಾರ್ಪಿಯೋ ವಾಹನದಲ್ಲಿ ದೊಡ್ಡಬಳ್ಳಾಪುರದ ಡಿವೈಎಸ್‌ಪಿರವರ ಕಛೇರಿಗೆ ಹೋಗಿದ್ದೆ. ಆಗ ತನಿಖಾಧಿಕಾರಿಯವರು ನನ್ನ ವಾಹನವನ್ನು ಪರಿಶೀಲಿಸಿದ ಬಗ್ಗೆ ನೆನಪಿಲ್ಲ, ಅವರು ನನ್ನ ವಾಹನವನ್ನು ಆಗ ನೋಡಿದ್ದಾರೆ. ಪೋಲಿಸರು ನನ್ನ ವಾಹನದಲ್ಲಿ ರಕ್ತ ಕಲೆಗಳು ಆಗಿದ್ದ ಬಗ್ಗೆ ನೋಡಿದ್ದ ಬಗ್ಗೆ ಈಗ ನನಗೆ ನೆನಪಿಲ್ಲ, ಆ ದಿನ ನನ್ನೊಂದಿಗೆ ಪ್ರಾಸಾ-1ರಿಂದ 3, 5 ಮತ್ತು 7 ಇವರು ಸಹ ಬಂದಿದ್ದರು. ಅವರ

ಹೇಳಿಕೆಗಳನ್ನು ಸಹ ತನಿಖಾಧಿಕಾರಿಯವರು ಪಡೆದರು. ಸ್ಥಳ ಮಹಜರ್ ಸಮಯದಲ್ಲಿ ನಾನು ಇದ್ದೆ. ಮೃತರು ಮತ್ತು ಗಾಯಾಳುಗಳು ಬಿದ್ದ ಸ್ಥಳವನ್ನು ಪೋಲಿಸರಿಗೆ ನಾನು ಸಹ ತೋರಿಸಿದೆ. ಪೋಲಿಸರು ಸ್ಥಳಗಳಿಂದ ರಕ್ತ ಹತ್ತಿದ ಮಣ್ಣನ್ನು ಸಂಗ್ರಹಿಸಿದ ಬಗ್ಗೆ ನೆನಪಿಲ್ಲ.

**(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಕಾಲಾವಧಿ ಮುಗಿದಿದ್ದರಿಂದ ಮಧ್ಯಾಹ್ನದ ಕಾಲಾವಧಿಗಾಗಿ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು)**

**(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಓ ಹೇ ಕೇ ಸರಿ ಇದೆ ಎಂದು ನುಡಿದಿದ್ದಾರೆ.**

**(ವಿ. ಎಂ. ಆನಂದಶೆಟ್ಟಿ)**
2ನೇ ಅಪರ ಜಿಲ್ಲಾ ಮತ್ತು ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

**ಮಧ್ಯಾಹ್ನ ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು**

**ಮುಂದುವರಿದ ಪಾಟೀ ಸವಾಲುಃ 5 ಮತ್ತು 6ನೇ ಆರೋಪಿತರ ಪರಃ**
**ಶ್ರೀ ಎಸ್ ಎಸ್ ವಕೀಲರಿಂದಃ**

40. ಬೋರಿಂಗ್ ಆಸ್ಪತ್ರೆಯಲ್ಲಿ ನನಗೆ ಪರಿಚಯದ ವೈದ್ಯರಿಲ್ಲ. ಬೋರಿಂಗ್ ಆಸ್ಪತ್ರೆಯಿಂದ ಘಟನೆಯ ದಿನ ನನಗೆ ಯಾರೂ ಖುದ್ದಾಗಿ ಫೋನ್ ಮಾಡಿಲ್ಲ. ದೊಡ್ಡಚಿನ್ನಪ್ಪ ಮೃತವಾಗಿರುವುದು ಬೋರಿಂಗ್ ಆಸ್ಪತ್ರೆ ವೈದ್ಯರು ತಿಳಿಸಿದರು ಎಂಬ ವಿಷಯವನ್ನು ಪೋಲಿಸರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. ನಾನೇ ನಿಪಿ-1ನ್ನು ಬರೆದಿದ್ದೇನೆ ಎಂದು ಪೋಲಿಸರಿಗೆ ಹೇಳಿಲ್ಲ.

41. ಈ ಘಟನೆಗೆ 6ನೇ ಆರೋಪಿ ಶಾಂತಕುಮಾರ, 15 ಮತ್ತು 16ನೇ ಆರೋಪಿಗಳಾದ ನಾರಾಯಣಸ್ವಾಮಿ, ವೆಂಕಟಪ್ಪರವರೇ ಕಾರಣ ಹಾಗೂ 6ನೇ ಆರೋಪಿ, 1ನೇ ಆರೋಪಿ ಮತ್ತು ಇತರ 18 ಜನರನ್ನು ಎತ್ತಿಗಟ್ಟಿದ್ದೆ ಈ ಘಟನೆಗೆ ಕಾರಣ ಹಾಗೂ ನಾನು ಬಿಜೆಪಿ

ಕಾರ್ಯಕರ್ತನಾಗಿದ್ದು 6ನೇ ಆರೋಪಿತ ಶಾಂತಕುಮಾರ ರಾಜಕೀಯ ದ್ವೇಷದಿಂದ ಇಟ್ಟಿಗೆ ವ್ಯವಹಾರದ ಹಿನ್ನೆಲೆಯಲ್ಲಿ ನನ್ನನ್ನು ಕೊಲೆ ಮಾಡಬೇಕು ಎಂದು ಪ್ರಯತ್ನ ಮಾಡಿದ್ದು ಆದರೆ ನನ್ನನ್ನು ಕೊಲೆ ಮಾಡಲು ಸಾಧ್ಯವಾಗದೇ ಮೃತ ದೊಡ್ಡಚಿನ್ನಪ್ಪ, ಮೃತ ಗಾಯಿತ್ರಮ್ಮ, ಮೃತ ದೇವರಾಜುರವರನ್ನು ಕೊಲೆ ಮಾಡಿರುತ್ತಾರೆ ಹಾಗೂ ಚಾಸಾ-1ರಿಂದ 3ರವರಿಗೆ ತಲೆ ಮತ್ತು ಸೊಂಟಕ್ಕೆ ಆಯುಧಗಳಿಂದ ತಿವಿದು ಹಲ್ಲೆ ಮಾಡಿರುತ್ತಾರೆ ಎಂದು ಮುಖ್ಯ ವಿಚಾರಣೆಯ ಪ್ಯಾರಾ 10ರಲ್ಲಿ ಹೇಳಿದ ಸಂಗತಿಗಳನ್ನು ಪೋಲಿಸರಿಗೆ ಹೇಳಿಲ್ಲ ಎಂದರೆ ಸರಿಯಲ್ಲ.

42. ದಿ:12.02.2010ರಂದು ನಾನು ಬೆಂಗಳೂರಿನ ನನ್ನ ರೂಮಿನಲ್ಲಿಯೇ ಇದ್ದೆ ಮತ್ತು ಮಧ್ಯಾಹ್ನ 12.00 ಘಂಟೆಯ ಮೇಲೆ ಫೋನ್ ಮಾಹಿತಿ ಬಂದ ಮೇಲೆ ನಾನು ನೇರವಾಗಿ ದೇವನಹಳ್ಳಿ ಆಸ್ಪತ್ರೆಗೆ ಹೋದೆ ಎಂದರೆ ಸರಿಯಲ್ಲ. ಅಲ್ಲಿ ನನಗೆ ಮೂರು ಜನರು ಮೃತ ಆಗಿರುವುದು ಗೊತ್ತಾಯಿತು ಎಂದರೆ ಸರಿಯಲ್ಲ. ಪ್ರಾಸಾ-1ರಿಂದ 3 ಇವರಿಗೆ ಯಾವುದೇ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಚಿತಾವಣೆಯ ಮೇರೆಗೆ ಸದರಿ ಪ್ರಾಸಾ-1ರಿಂದ 3 ಇವರು ಗಾಯಾಳುಗಳು ಎಂದು ಆಸ್ಪತ್ರೆಯಲ್ಲಿ ದಾಖಲೆಗಳು ಸೃಷ್ಟಿಯಾಗಿವೆ ಎಂದರೆ ಸರಿಯಲ್ಲ. ದಿ:12.02.2010 ರಂದು ನಾನು ನಮ್ಮೂರಿಗೆ ಹೋಗಿರಲಿಲ್ಲ ಮತ್ತು ನನ್ನನ್ನು ಮನೆಯನ್ನು ಕೂಡಿ ಹಾಕಿರಲಿಲ್ಲ ಎಂದರೆ ಸರಿಯಲ್ಲ. ಈಗ ಓದಿ ಹೇಳಿದ 4ರಿಂದ 6ನೇ ಆರೋಪಿತರು ಮತ್ತು 15ರಿಂದ 19ನೇ ಆರೋಪಿತರು ಅವರು ಘಟನೆಯ ಸಮಯದಲ್ಲಿ ಹಾಜರಿದ್ದರು ಎಂದು ಮತ್ತು 6ನೇ ಆರೋಪಿ ಪ್ರಚೋದನೆ ನೀಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಉಳಿದ ಆರೋಪಿತರ ಪರ ವಕೀಲರಿಂದ:</u>**

ಉಳಿದ ಆರೋಪಿತರ ಪರ ವಕೀಲರ ಸಹಾಯಕ ವಕೀಲರು ಸಮಯ ಕೋರುತ್ತಾರೆ. ನ್ಯಾಯದ ಹಿತದೃಷ್ಟಿಯಿಂದ ಅಂತಿಮವಾಗಿ ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ಅವರು ಹೇಳಿದಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ ಮತ್ತು ಓದಿ ಹೇಳಲಾಗಿ ಸಾಕ್ಷಿದಾರರು ಸರಿ ಇದೆ ಎಂದು ಒಪ್ಪಿದ್ದಾಗಿ ದೃಡೀಕರಿಸುತ್ತೇನೆ)

ಓ ಹೇ ಕೇ ಸರಿ ಇದೆ ಎಂದು ನುಡಿದಿದ್ದಾರೆ.

(ವಿ. ಎಂ. ಆನಂದಶೆಟ್ಟಿ)
2ನೇ ಅಪರ ಜಿಲ್ಲಾ ಮತ್ತು ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.